# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 463 |
| ಸದಸ್ಯರ ಹೆಸರು | : | ಶ್ರೀ ಮುನಿರಾಜುಗೌಡ ಪಿ.ಎಂ.<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 07.12.2023 |
| ಉತ್ತರಿಸಬೇಕಾದ ಸಚಿವರು | : | ಉಪ ಮುಖ್ಯಮಂತ್ರಿಯವರು |

*******

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಡಾ: ಕೆ. ಶಿವರಾಮಕಾರಂತ ಬಡಾವಣೆಗೆ ರೈತರಿಂದ/ಭೂಮಾಲೀಕರಿಂದ ವಶಪಡಿಸಿಕೊಳ್ಳಲಾದ ಒಟ್ಟು ಭೂಮಿ ಎಷ್ಟು; ಅದಕ್ಕೆ ಪರಿಹಾರವಾಗಿ ಎಷ್ಟು ನಿವೇಶನಗಳನ್ನು ರೈತರಿಗೆ ನೀಡಲಾಗುವುದು; | ➢ ಡಾ॥ ಕೆ. ಶಿವರಾಮಕಾರಂತ ಬಡಾವಣೆಗಾಗಿ ಒಟ್ಟು 3837 ಎಕರೆ 05.25 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ಅಧಿಸೂಚನೆ ಹೊರಡಿಸಲಾಗಿದೆ.<br>➢ 40:60 ಅನುಪಾತದಡಿ ಪ್ರತಿ ಎಕರೆಗೆ 9583 ಚ.ಅಡಿಗಳಂತೆ, ಅಭಿವೃದ್ಧಿಪಡಿಸಿದ ನಿವೇಶನಗಳನ್ನು ಆಯಾ ಭೂಮಾಲೀಕರ ಜಮೀನಿನ ವಿಸ್ತೀರ್ಣಕ್ಕನುಗುಣವಾಗಿ ವಿವಿಧ ಅಳತೆಯ ನಿವೇಶನಗಳನ್ನು ಹಂಚಿಕೆ ಮಾಡಲಾಗುವುದು. |
| ಆ) | ಭೂಮಿ ಕಳೆದುಕೊಂಡ ರೈತರಿಗೆ/ ಭೂಮಾಲೀಕರಿಗೆ ಅವರ ಜಮೀನಿನಲ್ಲಿ/ ಗ್ರಾಮದಲ್ಲಿ ನಿವೇಶನ ನೀಡಲು ಕ್ರಮಕೈಗೊಳ್ಳುವುದೇ; ಅಥವಾ ಬೇರೆ ಸ್ಥಳದಲ್ಲಿ ನಿವೇಶನ ನೀಡಲು ಸರ್ಕಾರ ಕ್ರಮಕೈಗೊಳ್ಳುವುದೇ; | ಬಡಾವಣೆಯಲ್ಲಿ ರಚಿತವಾಗಿರುವ ವಿವಿಧ ಅಳತೆಯ ನಿವೇಶನಗಳ ಸಂಖ್ಯೆಯನ್ನು ಗಮನದಲ್ಲಿರಿಸಿ ಸಾಧ್ಯವಾದಷ್ಟು ಮಟ್ಟಿಗೆ ಆಯಾ ಗ್ರಾಮದಲ್ಲಿ ಲಭ್ಯವಾಗುವ ವಿವಿಧ ಅಳತೆಯ ನಿವೇಶನಗಳನ್ನು ಹಂಚಿಕೆ ಮಾಡಲು ಯೋಜಿಸಲಾಗುತ್ತಿದೆ. |
| ಇ) | ಸದರಿ ಬಡಾವಣೆಯಲ್ಲಿ ಯಾವ ಅಳತೆಯ ನಿವೇಶನಗಳನ್ನು ನಿರ್ಮಿಸಲಾಗಿದೆ; ಅದರಲ್ಲಿ ರೈತರಿಗೆ/ಭೂಮಾಲೀಕರಿಗೆ ಯಾವ ಅಳತೆಯ ನಿವೇಶನಗಳನ್ನು ನೀಡಲಾಗುವುದು; | ➢ ಡಾ॥ ಕೆ. ಶಿವರಾಮಕಾರಂತ ಬಡಾವಣೆಯ ಅನುಮೋದಿತ ನಕ್ಷೆಯಂತೆ ಬಡಾವಣೆಯಲ್ಲಿ 6x9 ಮೀ, 9x12 ಮೀ, 9x15 ಮೀ, 12x18ಮೀ ಹಾಗೂ 15x24 ಮೀ. ಅನಿಯತ ಅಳತೆ ನಿವೇಶನಗಳನ್ನು ರಚಿಸಲಾಗುತ್ತಿದೆ.<br>➢ ಭೂಮಾಲೀಕರ ಅರ್ಹತಾ ವಿಸ್ತೀರ್ಣವನ್ನು ಗಮನದಲ್ಲಿರಿಸಿ ವಿವಿಧ ಅಳತೆಯ ನಿವೇಶನಗಳನ್ನು ಹಂಚಿಕೆ ಮಾಡಲು ಯೋಜಿಸಲಾಗುತ್ತಿದೆ. |
| ಈ) | ರೈತರಿಗೆ/ಭೂಮಾಲೀಕರಿಗೆ ನೀಡಲಾಗುವ ನಿವೇಶನಕ್ಕೆ ಇರುವ ರಸ್ತೆಯ ವಿಸ್ತೀರ್ಣವೆಷ್ಟು; ಮತ್ತು ಬಡಾವಣೆಯಲ್ಲಿರುವ ಇತರೆ ನಿವೇಶನಗಳಿಗೆ ಇರುವ ರಸ್ತೆಯ ವಿಸ್ತೀರ್ಣವೆಷ್ಟು; | 9.0 ಮೀ, 12.0 ಮೀ, 15.0 ಮೀ. 18.0 ಮೀ, 24.0 ಮೀ, 30.0 ಮೀ, ಹಾಗೂ 45.0 ಮೀ. ಅಗಲದ ರಸ್ತೆಗಳನ್ನು ಬಡಾವಣೆಯಲ್ಲಿ ನಿರ್ಮಿಸಲಾಗುತ್ತಿದೆ. |
| ಉ) | ರೈತರಿಗೆ/ಭೂಮಾಲೀಕರಿಗೆ ಕನಿಷ್ಠ ಅಳತೆಯ ರಸ್ತೆ ಹೊಂದಿರುವ ನಿವೇಶನ ನೀಡಿ ಇತರರಿಗೆ ವಿಶಾಲವಾದ ರಸ್ತೆ ಹೊಂದಿರುವ ನಿವೇಶನ ನೀಡಲು ಕ್ರಮಕೈಗೊಂಡಿರುವುದು ಸೂಕ್ತವೇ; ಇದರಿಂದ ಭೂಮಾಲೀಕರಿಗೆ/ರೈತರಿಗೆ ಅನ್ಯಾಯ ಮಾಡಿದಂತಾಗುವುದಿಲ್ಲವೇ; ರೈತರು ಇಚ್ಛಿಸಿದಲ್ಲಿ 30x40 ಮತ್ತು 50x80 ಚದುರ ಅಳತೆಯ ನಿವೇಶನ ನೀಡಲಾಗುವುದೇ? | ಭೂಮಾಲೀಕರಿಗೆ ಅರ್ಹತಾ ವಿಸ್ತೀರ್ಣದನ್ವಯ ಲಭ್ಯವಾಗುವ ವಿವಿಧ ಅಳತೆಯ ನಿವೇಶನಗಳನ್ನು ಹಂಚಿಕೆ ಮಾಡಲು ಯೋಜಿಸಲಾಗುತ್ತಿದೆ. |

**ಸಂಖ್ಯೆ: ನಅಇ 289 ಬೆಂಭೂಸ್ವಾ 2023**

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ